"ಮಧುರ ಮಕ್ಕಳೇ - ಇದು ನಿಮ್ಮ ಅಂತಿಮ ಜನ್ಮವಾಗಿದೆ, ಆದುದರಿಂದ ವಿಕಾರಗಳನ್ನು ಸನ್ಯಾಸ ಮಾಡಿ, ಈ ಅಂತಿಮ ಜನ್ಮದಲ್ಲಿ ರಾವಣನ ಬಂಧನದಿಂದ ತಮ್ಮನ್ನು ಬಿಡಿಸಿಕೊಳ್ಳಿ''

ಪ್ರಶ್ನೆ: ತಂದೆಯ ಆಶ್ರಯ ಯಾವ ಮಕ್ಕಳಿಗೆ ಸಿಗುತ್ತದೆ? ತಂದೆ ಯಾವ ಮಕ್ಕಳೊಂದಿಗೆ ಸದಾ ಪ್ರಸನ್ನರಾಗಿರುತ್ತಾರೆ?

ಉತ್ತರ: ಯಾರು ಸತ್ಯ ಹೃದಯಿಗಳಾಗಿರುತ್ತಾರೋ ಅವರಿಗೆ ತಂದೆಯ ಆಶ್ರಯ ಸಿಗುತ್ತದೆ. ಸತ್ಯ ಹೃದಯದ ಮೇಲೆ ಪ್ರಭು ಪ್ರಸನ್ನವಾಗುತ್ತಾರೆಂದು ಹೇಳಲಾಗುತ್ತದೆ. ಯಾವ ಮಕ್ಕಳು ತಂದೆಯ ಪ್ರತೀ ಆದೇಶವನ್ನು ಜೀವನದಲ್ಲಿ ತರುತ್ತಾರೆ, ತಂದೆ ಅವರೊಂದಿಗೆ ಪ್ರಸನ್ನವಾಗಿರುತ್ತಾರೆ. ತಂದೆಯ ಆದೇಶವಾಗಿದೆ-ನೆನಪಿನಲ್ಲಿದ್ದು ಪವಿತ್ರರಾಗಿ ನಂತರ ಯಾರಿಗಾದರೂ ದಾರಿ ತೋರಿಸುತ್ತಾ ಸೇವೆ ಮಾಡಬೇಕು. ಶೂದ್ರರ ಸಂಗದಿಂದ ತಮ್ಮನ್ನು ಕಾಪಾಡಿಕೊಳ್ಳಬೇಕು. ಕರ್ಮೇಂದ್ರಿಯಗಳಿಂದ ಎಂದಿಗೂ ಕೆಟ್ಟ ಕರ್ಮವನ್ನು ಮಾಡಬಾರದು. ಯಾರು ಈ ಎಲ್ಲಾ ಮಾತುಗಳನ್ನು ಧಾರಣೆ ಮಾಡುತ್ತಾರೆ, ಅವರೊಂದಿಗೆ ತಂದೆ ಪ್ರಸನ್ನವಾಗಿರುತ್ತಾರೆ.

ಗೀತೆ: ನನಗೆ ಆಶ್ರಯ ಕೊಡುವವರು........

ಓಂ ಶಾಂತಿ. ಇಲ್ಲಿ ಮಕ್ಕಳು ಜ್ಞಾನ ಕೇಳುತ್ತಿದ್ದೀರಿ. ಯಾವ ಜ್ಞಾನ? ಶಾಸ್ತ್ರಗಳ ಜ್ಞಾನವೇನು? ಇದು ಶಾಸ್ತ್ರಗಳ ಜ್ಞಾನವಲ್ಲ. ಎಲ್ಲಾ ಮನುಷ್ಯರು ಶಾಸ್ತ್ರಗಳ ಜ್ಞಾನವನ್ನು ಕೇಳುತ್ತಾರೆಂದು ಮಕ್ಕಳು ತಿಳಿದುಕೊಂಡಿದ್ದೀರಿ. ಇಲ್ಲಿ ಪರಮಪಿತ ಪರಮಾತ್ಮ ಜ್ಞಾನ ಕೊಡುತ್ತಾರೆ. ಯಾವುದೇ ಶಾಸ್ತ್ರ ಮೊದಲಾದವುಗಳನ್ನು ಓದುವಂತಹ ಅಥವಾ ಅಧ್ಯಯನ ಮಾಡುವಂತಹ ಸನ್ಯಾಸಿಗಳು ಈ ರೀತಿ ಹೇಳುವುದಿಲ್ಲ. ಅವರು ಯಾವುದೇ ಜ್ಞಾನವನ್ನು ಹೇಳುವುದಿಲ್ಲ. ಯಾವುದೇ ಸತ್ಸಂಗಗಳಲ್ಲಿ ಹೋದಾಗ ಅಲ್ಲಿ ಮನುಷ್ಯರು ಇರುತ್ತಾರೆ. ಅವರಿಗೆ ಶಾಸ್ತ್ರಿಗಳೇ, ಪಂಡಿತರೇ (ಶಾಸ್ತ್ರೀಜಿ ಪಂಡಿತ್ಜಿ) ಅಥವಾ ಮಹಾತ್ಮರೇ ಎಂದು ಹೇಳುತ್ತಾರೆ. ಮನುಷ್ಯರೊಂದಿಗೆ ಹೆಸರಿನ ಅಂತರವನ್ನು ಇಡುತ್ತಾರೆ. ನಮಗಿಲ್ಲಿ ಯಾವುದೇ ಮನುಷ್ಯರು ಜ್ಞಾನ ಕೊಡುತ್ತಿಲ್ಲವೆಂದು ಮಕ್ಕಳು ತಿಳಿದುಕೊಂಡಿದ್ದೀರಿ. ಆದರೆ ಮನುಷ್ಯರ ಮುಖಾಂತರ ನಿರಾಕಾರ ಪರಮಪಿತ ಪರಮಾತ್ಮ ಜ್ಞಾನ ಕೊಡುತ್ತಾರೆ. ಈ ಮಾತುಗಳನ್ನು ಯಾವುದೇ ಸತ್ಸಂಗದಲ್ಲಿ ಹೇಳುವುದಿಲ್ಲ. ಭಾಷಣ ಮಾಡುವವರ ಬುದ್ಧಿಯಲ್ಲಿಯೂ ಸಹ ಈ ಮಾತುಗಳಿರುವುದಿಲ್ಲ. ನಮಗೆ ಜ್ಞಾನ ಕೊಡುತ್ತಿರುವವರು ಯಾವ ಮನುಷ್ಯ ಅಥವಾ ದೇವತೆಯಲ್ಲ. ಈ ಸಮಯದಲ್ಲಿ ದೇವೀ- ದೇವತಾ ಧರ್ಮ ಇಲ್ಲದಿರಬಹುದು. ಆದರೂ ಸಹ ಬ್ರಹ್ಮ, ವಿಷ್ಣು, ಶಂಕರ ಸೂಕ್ಷ್ಮವತನ ವಾಸಿಗಳ ಹೆಸರನ್ನು ಮಹಿಮೆ ಮಾಡುತ್ತಾರೆ. ಲಕ್ಷ್ಮೀ-ನಾರಾಯಣ ಮೊದಲಾದವರೆಲ್ಲರೂ ದೈವೀ ಗುಣವುಳ್ಳ ಮನುಷ್ಯರಾಗಿದ್ದಾರೆ. ಈ ಸಮಯದಲ್ಲಿ ಎಲ್ಲರೂ ಆಸುರಿ ಗುಣವುಳ್ಳ ಮನುಷ್ಯರಾಗಿದ್ದಾರೆ, ಯಾವ ಮನುಷ್ಯರೂ ಸಹ ತಮ್ಮನ್ನು ಆತ್ಮನೆಂದು ತಿಳಿದುಕೊಂಡಿಲ್ಲ. ಪರಮಾತ್ಮ ನಮಗೆ ಇಂತಹವರ ಮೂಲಕ ಜ್ಞಾನ ಕೊಡುತ್ತಿದ್ದಾರೆಂದು ತಿಳಿದುಕೊಳ್ಳುವುದಿಲ್ಲ. ಅವರು ಮಹಾತ್ಮ ಅಥವಾ ಶಾಸ್ತ್ರಿಗಳ ಮೂಲಕ ಕಥೆ ಕೇಳುತ್ತಿದ್ದೇವೆಂದು ತಿಳಿದುಕೊಳ್ಳುತ್ತಾರೆ. ವೇದ ಶಾಸ್ತ್ರ ಗೀತೆ ಮೊದಲಾದವುಗಳನ್ನು ಕೇಳುತ್ತೇವೆಂದು ಹೇಳುತ್ತಾರೆ. ತಂದೆ ನಿಮಗೆ ಯಾವುದೇ ಶಾಸ್ತ್ರಗಳನ್ನು ಹೇಳುತ್ತಿಲ್ಲವೆಂದು ಹೇಳುತ್ತಾರೆ. ನೀವು ತಮ್ಮನ್ನು ಆತ್ಮನೆಂದು ನಿಶ್ಚಯ ಮಾಡಿಕೊಳ್ಳಬೇಕು. ಹಾಗೂ ನೀವು ನನ್ನನ್ನು ಪತಿತಪಾವನ ಬಾ ಎಂದು ಕರೆಯುತ್ತಾ ಬಂದಿದ್ದೀರೆಂದು ತಂದೆ ಹೇಳುತ್ತಾರೆ. ಸರ್ವರ ದುಃಖಹರ್ತಾ, ಸುಖಕರ್ತಾ, ಸರ್ವರ ಶಾಂತಿದಾತ ಹಾಗೂ ಮುಕ್ತಿ-ಜೀವನ್ಮುಕ್ತಿ ದಾತ ಒಬ್ಬರೇ ಆಗಿದ್ದಾರೆ, ಯಾವುದೇ ಭಜನೆ ಅಥವಾ ಕಥೆಯನ್ನು ಭಕ್ತಿ ಮಾರ್ಗವೆಂದು ಹೇಳಲಾಗುತ್ತದೆ. ಭಕ್ತಿ ಮಾಡುವವರಿಗೂ ಸಹ ಭಕ್ತಿ ಮಾರ್ಗದ ಬಗ್ಗೆ ತಿಳಿದುಕೊಂಡಿಲ್ಲ. ಇಲ್ಲಿ ಎಲ್ಲಾ ಕಡೆ ಭಕ್ತಿಯೇ ಭಕ್ತಿ ಇದೆ. ಜ್ಞಾನ ಹಗಲಾಗಿದೆ, ಭಕ್ತಿ ರಾತ್ರಿಯಾಗಿದೆ. ಜ್ಞಾನವಿದ್ದಾಗ ಭಕ್ತಿ ಇರುವುದಿಲ್ಲ. ಭಕ್ತಿಯಿದ್ದಾಗ ಜ್ಞಾನವಿರುವುದಿಲ್ಲ. ದ್ವಾಪರ ಕಲಿಯುಗ ಭಕ್ತಿಯ ಯುಗಗಳಾಗಿವೆ, ಸತ್ಯ, ತ್ರೇತಾ ಜ್ಞಾನದ ಫಲವಾಗಿದೆ. ಈ ಫಲವನ್ನು ಜ್ಞಾನ ಸಾಗರ ಕೊಡುತ್ತಾರೆ. ಭಗವಂತ ಯಾವ ಫಲವನ್ನು ಕೊಡುತ್ತಾರೆ! ಫಲ ಅರ್ಥಾತ್ ಆಸ್ತಿ. ಭಗವಂತ ಮುಕ್ತಿಯ ಆಸ್ತಿಯನ್ನು ಕೊಡುತ್ತಾರೆ. ಜೊತೆಯಲ್ಲಿ ಜೀವನ್ಮುಕ್ತಿಯಲ್ಲಿ ಕರೆದೊಯ್ಯುತ್ತಾರೆ. ಇಂದು ಉಳಿಯಲು ಸ್ಥಾನವಿಲ್ಲದಷ್ಟು ಜನಸಂಖ್ಯೆ ಇದೆ. ದವಸ, ಧಾನ್ಯವೂ ಸಹ ಖಾಲಿಯಾಗಿದೆ. ಆದುದರಿಂದ ಭಗವಂತನೇ ಬರಬೇಕಾಗುತ್ತದೆ. ರಾವಣ ಎಲ್ಲರನ್ನು ಪತಿತರನ್ನಾಗಿ ಮಾಡಿದ್ದಾನೆ. ಪುನಃ ಪತಿತಪಾವನ ಬಂದು ಪಾವನ ಮಾಡುತ್ತಾರೆ. ಪತಿತರಿಂದ ಪಾವನ ಮಾಡುವಂತಹವರು ಹಾಗೂ ಪತಿತರನ್ನಾಗಿ ಮಾಡುವವರಿಬ್ಬರೂ ಸಹ ಬೇರೆ-ಬೇರೆಯಾಗಿದ್ದಾರೆ. ಪಾವನ ಪ್ರಪಂಚವನ್ನು ಪತಿತ ಪ್ರಪಂಚವನ್ನಾಗಿ ಮಾಡುವವರು ಯಾರೆಂದು ಹಾಗೂ ಪತಿತ ಪ್ರಪಂಚವನ್ನು ಪಾವನ ಪ್ರಪಂಚವನ್ನಾಗಿ ಮಾಡುವವರು ಯಾರು! ಪತಿತಪಾವನ ಬಾ ಎಂದು ಒಬ್ಬರಿಗೆ ಮಾತ್ರ ಹೇಳುತ್ತಾರೆ. ಸರ್ವರ ಪಾಲನಾ ಕರ್ತ ಒಬ್ಬರೇ ಆಗಿದ್ದಾರೆ. ಸತ್ಯಯುಗದಲ್ಲಿ ವಿಕಾರಗಳಿರುವುದಿಲ್ಲ. ವಿಕಾರದಲ್ಲಿ ಹೋಗುವವರಿಗೆ ಪತಿತರೆಂದು ಕರೆಯಲಾಗುತ್ತದೆ. ಸನ್ಯಾಸಿಗಳು ವಿಕಾರದಲ್ಲಿ ಹೋಗುವುದಿಲ್ಲ. ಆದುದರಿಂದ ಅವರಿಗೆ ಪತಿತರೆಂದು ಹೇಳಲಾಗದು. ಪವಿತ್ರ ಆತ್ಮರೆಂದು ಕರೆಯಲಾಗುತ್ತದೆ. ಪಂಚವಿಕಾರಗಳ ಸನ್ಯಾಸವನ್ನು ಮಾಡಿರುತ್ತಾರೆ. ಕಾಮ ನಂಬರ್ವನ್ ವಿಕಾರವಾಗಿದೆ. ಸನ್ಯಾಸಿಗಳಲ್ಲೂ ಬಹಳಷ್ಟು ಕ್ರೋಧವಿರುತ್ತದೆ. ಸ್ತ್ರೀಯನ್ನು ಬಿಟ್ಟು ಹೋಗುತ್ತಾರೆ. ಅವರ ಸಂಗದಲ್ಲಿ ಇದ್ದರೆ

ಮನುಷ್ಯರು ನಿರ್ವಿಕಾರಿ ಆಗಲು ಸಾಧ್ಯವಿಲ್ಲವೆಂದು ತಿಳಿಯುತ್ತಾರೆ. ವಿವಾಹದ ಅರ್ಥವೇ ಇದಾಗಿದೆ. ಸತ್ಯಯುಗದಲ್ಲಿ ಈ ಕಾಯಿದೆ ಇರುವುದಿಲ್ಲ. ಅಲ್ಲಿ ಪತಿತರೇ ಇರುವುದಿಲ್ಲವೆಂದು ತಂದೆ ತಿಳಿಸುತ್ತಾರೆ. ದೇವತೆಗಳ ಮಹಿಮೆ ಸರ್ವಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ ಆಗಿದೆ. ದ್ವಾಪರಯುಗದಿಂದ ರಾವಣರಾಜ್ಯ ಪ್ರಾರಂಭವಾಗುತ್ತದೆ. ತಂದೆ ಕಾಮದ ಮೇಲೆ ವಿಜಯಿಗಳಾಗಬೇಕೆಂದು ತಿಳಿಸಿಕೊಡುತ್ತಾರೆ. ನೀವು ನನ್ನನ್ನು ಮತ್ತು ಪವಿತ್ರ ಪ್ರಪಂಚವನ್ನು ನೆನಪು ಮಾಡಿದಾಗ ಪತಿತರಾಗಲು ಸಾಧ್ಯವಿಲ್ಲ. ತಂದೆ ತಿಳಿಸುತ್ತಾರೆ - ನಾನು ಪಾವನ ಪ್ರಪಂಚವನ್ನು ಸ್ಥಾಪನೆ ಮಾಡಲು ಬಂದಿದ್ದೇನೆ, ಮತ್ತೆ ನೀವು ಒಬ್ಬ ತಂದೆಯ ಮಕ್ಕಳು ಬ್ರಾಹ್ಮಣ-ಬ್ರಾಹ್ಮಣಿಯರು ಪರಸ್ಪರ ಸಹೋದರ-ಸಹೋದರಿಯಾಗಿದ್ದೀರಿ. ಈ ಮಾತನ್ನು ಎಲ್ಲಿಯವರೆಗೆ ಶ್ರದ್ಧೆಯಿಂದ ಬುದ್ಧಿಯಲ್ಲಿ ಧಾರಣೆ ಮಾಡುವುದಿಲ್ಲ, ಅಲ್ಲಿಯವರೆಗೆ ವಿಕಾರಗಳಿಂದ ಮುಕ್ತರಾಗಲು ಸಾಧ್ಯವಿಲ್ಲ. ಬ್ರಹ್ಮಾತಂದೆಯ ಮಕ್ಕಳಾಗದೆ ಪಾವನವಾಗುವುದು ಬಹಳ ಕಷ್ಟವಾಗುತ್ತದೆ. ತಂದೆಯಿಂದ ಸಹಯೋಗವೂ ಸಹ ಸಿಗುವುದಿಲ್ಲ. ಒಂದುವೇಳೆ ಬ್ರಹ್ಮನ ಮಾತನ್ನು ಬಿಟ್ಟು ನೀವು ತಮ್ಮನ್ನು ಭಗವಂತನ ಮಕ್ಕಳೆಂದು ಹೇಳುತ್ತೀರಿ, ಸಾಕಾರದ ಸಂಬಂಧದಿಂದ ಸಹೋದರ-ಸಹೋದರಿಯಾಗಿ ಪರಸ್ಪರ ವಿಕಾರಕ್ಕೆ ವಶಿಭೂತರಾಗಬಾರದು. ಎಲ್ಲರೂ ಸಹ ಈಶ್ವರನ ಸಂತಾನರೆಂದು ಹೇಳುತ್ತಾರೆ. ಹಾಗಾದರೆ ತಂದೆ ಹೇಳುತ್ತಾರೆ-ಮಕ್ಕಳೇ ನಾನು ಬಂದಿದ್ದೇನೆ, ಯಾರು ನನ್ನ ಮಕ್ಕಳಾಗುತ್ತೀರಿ, ಪರಸ್ಪರ ಸಹೋದರ-ಸಹೋದರಿಯಾಗಿ ವಿಕಾರದಲ್ಲಿ ಹೋಗಬಾರದು. ಬ್ರಹ್ಮನ ಮುಖಾಂತರವೂ ಸಹ ನೀವು ಸಹೋದರ-ಸಹೋದರಿಯಾಗಿರುವ ಕಾರಣ ವಿಕಾರದಲ್ಲಿ ಹೋಗಬಾರದು. ಇದು ನಿಮ್ಮ ಅಂತಿಮ ಜನ್ಮವೆಂದು ತಂದೆ ಹೇಳುತ್ತಾರೆ. ಈ ಒಂದು ಜನ್ಮದಲ್ಲಿ ಈ ವಿಕಾರಗಳನ್ನು ತ್ಯಾಗ ಮಾಡಿ. ಸನ್ಯಾಸಿಗಳು ಕಾಡಿಗೆ ಹೋಗುವ ಸಲುವಾಗಿ ಎಲ್ಲಾವನ್ನು ಬಿಡುತ್ತಾರೆ. ನೀವು ಪವಿತ್ರ ಪ್ರಪಂಚಕ್ಕೆ ಹೋಗುವ ಸಲುವಾಗಿ ವಿಕಾರಗಳನ್ನು ಬಿಡುತ್ತೀರಿ. ಸನ್ಯಾಸಿಗಳಿಗೆ ಯಾವುದೇ ಪ್ರಲೋಭನೆಗಳಿರುವುದಿಲ್ಲ. ಗೃಹಸ್ಥಿಗಳು ಅವರಿಗೆ ಬಹಳ ಗೌರವನ್ನು ಕೊಡುತ್ತಾರೆ. ಆದರೂ ಸಹ ಅವರು ಮಂದಿರಗಳಲ್ಲಿ ಪೂಜೆ ಮಾಡುವಷ್ಟು ಯೋಗ್ಯರಾಗುವುದಿಲ್ಲ. ದೇವತೆಗಳು ಮಾತ್ರ ಮಂದಿರದ ಪೂಜೆಗೆ ಯೋಗ್ಯರಾಗುತ್ತಾರೆ. ಏಕೆಂದರೆ ಅವರ ಆತ್ಮ ಹಾಗೂ ಶರೀರಗಳೆರಡು ಪವಿತ್ರವಾಗುತ್ತವೆ. ಈ ಸಮಯದಲ್ಲಿ ನಮಗೆ ಪವಿತ್ರ ಶರೀರವು ಸಿಗುವುದಿಲ್ಲ. ಇದು ತಮೋಪ್ರಧಾನ ಪತಿತ ಶರೀರವಾಗಿದೆ. ಪಂಚತತ್ವಗಳೂ ಸಹ ಪತಿತವಾಗಿವೆ. ಸತ್ಯಯುಗದಲ್ಲಿ ಆತ್ಮ ಪವಿತ್ರವಾಗಿರುವ ಕಾರಣ ಪಂಚತತ್ವಗಳೂ ಸಹ ಪವಿತ್ರವಾಗಿರುತ್ತವೆ. ಈಗ ಆತ್ಮ ಹಾಗೂ ಶರೀರ ತಮೋಪ್ರಧಾನವಾಗಿದ್ದು ತತ್ವಗಳೂ ಸಹ ತಮೋಪ್ರಧಾನವಾಗಿವೆ. ಆದುದರಿಂದ ಕ್ಷಾಮ, ಬಿರುಗಾಳಿ ಮೊದಲಾದವುಗಳು ಆಗುತ್ತಿರುತ್ತವೆ. ಯಾರಿಗಾದರೂ ದುಃಖ ಕೊಡುವುದೂ ಸಹ ತಮೋಗುಣವಾಗಿದೆ. ಸತ್ಯಯುಗದಲ್ಲಿ ತತ್ವಗಳೂ ಸಹ ಯಾರಿಗೂ ದುಃಖ ಕೊಡುವುದಿಲ್ಲ. ಈ ಸಮಯದಲ್ಲಿ ಮನುಷ್ಯರ ಬುದ್ಧಿ ತಮೋಪ್ರಧಾನವಾಗಿದೆ. ಸತೋ, ರಜೋ, ತಮೋ ಸ್ಥಿತಿಗಳಲ್ಲಿ ಅವಶ್ಯವಾಗಿ ಬರಬೇಕು. ಇಲ್ಲವೆಂದರೆ ಹೊಸ ಪ್ರಪಂಚವನ್ನಾಗಿ ಮಾಡಲು ಹಳೆಯ ಪ್ರಪಂಚ ಹೇಗಾಗುತ್ತದೆ. ಈಗ ತಂದೆ ತಿಳಿಸುತ್ತಾರೆ-ಮಕ್ಕಳೇ ಪಾವನರಾಗಿ, ಈ ಅಂತಿಮ ಜನ್ಮದಲ್ಲಿ ತಮ್ಮನ್ನು ಬಿಡಿಸಿಕೊಳ್ಳಿ. ಅಸುರಿ ಮತದಂತೆ ನಡೆದು ನೀವು ಅರ್ಧಕಲ್ಪದಿಂದ ಪತಿತರಾಗಿದ್ದೀರಿ. ಪತಿತರಾಗುವುದು ಬಹಳ ಕೆಟ್ಟ ಅಭ್ಯಾಸವಾಗಿದೆ. ಕಾಮ ಎಲ್ಲಕ್ಕಿಂತ ದೊಡ್ಡ ಶತ್ರುವಾಗಿದೆ. ಸಂಗದ ಕಾರಣ ಚಿಕ್ಕ ವಯಸ್ಸಿನಲ್ಲೇ ವಿಕಾರದಲ್ಲಿ ಹೋಗುತ್ತಾರೆ. ಈ ಸಮಯವೇ ಅದಾಗಿದೆ. ಅವಶ್ಯವಾಗಿ ಪತಿತರಾಗಬೇಕು. ಸನ್ಯಾಸ ಧರ್ಮದ ಪಾತ್ರವು ಇದೆ. ಈ ಪ್ರಪಂಚವನ್ನು ಬಹಳ ಸುಡುವುದರಿಂದ ಸ್ವಲ್ಪ ರಕ್ಷಿಸಿದ್ದಾರೆ. ಈ ನಾಟಕವನ್ನು ನೀವು ಮಕ್ಕಳು ಮಾತ್ರ ತಿಳಿದುಕೊಂಡಿದ್ದೀರಿ. ಕ್ರಿಶ್ಚಿಯನ್ ಧರ್ಮ ಸ್ಥಾಪನೆಯಾಗಿ ಇಷ್ಟು ವರ್ಷಗಳಾಯಿತೆಂದು ಹೇಳುತ್ತಾರೆ, ಹಾಗಾದರೆ ಆ ಧರ್ಮದ ಅಂತ್ಯ ಯಾವಾಗ ಆಗುತ್ತದೆ ಎಂದು ಯಾರೂ ಹೇಳುವುದಿಲ್ಲ. ಕಲಿಯುಗ 40 ಸಾವಿರ ವರ್ಷ ನಡೆಯುವುದೆಂದು ಹೇಳುತ್ತಾರೆ, ಹಾಗಾದರೆ ಕ್ರಿಶ್ಚಿಯನ್ ಮೊದಲಾದ ಧರ್ಮಗಳೂ ಸಹ 40 ಸಾವಿರ ವರ್ಷದವರೆಗೆ ವೃದ್ಧಿಯಾಗುತ್ತಿರುತ್ತವೆ. ಈಗ ಐದು ಸಾವಿರ ವರ್ಷದ ನಾಟಕದಲ್ಲಿಯೇ ವಾಸಿಸಲು ಸ್ಥಾನವಿಲ್ಲ, ಹಾಗಾದರೆ 40 ಸಾವಿರ ವರ್ಷದವರೆಗೆ ಏನಾಗಬಹುದು? ಶಾಸ್ತ್ರಗಳಲ್ಲಿ ಬಹಳ ಸುಳ್ಳನ್ನು ಬರೆದಿದ್ದಾರೆ. ಆದುದರಿಂದ ಈ ಮಾತುಗಳನ್ನು ಕೆಲವರು ಮಾತ್ರ ತಿಳಿದುಕೊಂಡು ಹೆಜ್ಜೆ-ಹೆಜ್ಜೆ ಶ್ರೀಮತದಂತೆ ನಡೆಯುತ್ತಾರೆ. ಶ್ರೀಮತದಂತೆ ನಡೆಯುವುದು ಬಹಳ ಕಷ್ಟವಾಗುತ್ತದೆ. ಇಡೀ ಜಗತ್ತು ಯಾವ ಲಕ್ಷ್ಮೀ-ನಾರಾಯಣರನ್ನು ಪೂಜಿಸುತ್ತಾರೆ, ಈಗ ನೀವು ಆ ರೀತಿ ಆಗುತ್ತಿದ್ದೀರಿ. ಇದನ್ನು ನಂಬರ್ವಾರ್ ನೀವು ಮಾತ್ರ ತಿಳಿದುಕೊಂಡಿದ್ದೀರಿ. ಈಗ ನನ್ನನ್ನು ಹಾಗೂ ಮನೆಯನ್ನು ನೆನಪು ಮಾಡಿ ಎಂದು ತಂದೆ ಹೇಳುತ್ತಾರೆ. ಮನೆಯ ನೆನಪು ಬರುತ್ತದೆಯಲ್ಲವೆ. ಮನುಷ್ಯರು 8-10 ವರ್ಷ ಯಾತ್ರೆಗಾಗಿ ಹೊರಟು ಮನೆಗೆ ಹಿಂತಿರುಗಿ ಬಂದಾಗ ಬಹಳ ಖುಷಿಯಾಗುತ್ತದೆ, ನಮ್ಮ ಜನ್ಮಸ್ಥಾನಕ್ಕೆ ಹೋಗುತ್ತಿದ್ದೇವೆಂದು ತಿಳಿಯುತ್ತಾರೆ. ಅದು ಸ್ವಲ್ಪ ಸಮಯದ ಪ್ರಯಾಣವಾಗಿದೆ, ಆದುದರಿಂದ ಮನೆಯನ್ನು ಮರೆಯುವುದಿಲ್ಲ. ಆದರೆ ನೀವು ಇಲ್ಲಿಗೆ ಬಂದು ಐದು ಸಾವಿರ ವರ್ಷಗಳಾಗಿರುವ ಕಾರಣ ಮನೆಯನ್ನು ಸಂಪೂರ್ಣವಾಗಿ ಮರೆತಿರುವಿರಿ.

ಈಗ ತಂದೆ ಬಂದು ತಿಳಿಸುತ್ತಿದ್ದಾರೆ-ಮಕ್ಕಳೇ ಇದು ಹಳೆಯ ಪ್ರಪಂಚವಾಗಿದೆ, ಈ ಪ್ರಪಂಚಕ್ಕೆ ಬೆಂಕಿ ಬೀಳುತ್ತದೆ, ಆದುದರಿಂದ ಯಾರೂ ಉಳಿಯದಂತೆ ಎಲ್ಲರೂ ಸಾಯಲೇಬೇಕು. ಆ ಕಾರಣ ನಿಸ್ಸಾರ ಜಗತ್ತನ್ನು ಹಾಗೂ ನಿಸ್ಸಾರ ಶರೀರದೊಂದಿಗೆ ಪ್ರೀತಿ ಇಟ್ಟುಕೊಳ್ಳಬೇಡಿ. ಈ ಶರೀರ ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಐದು ಸಾವಿರ ವರ್ಷಗಳಾಗಿವೆ. 84 ಶರೀರವನ್ನು ಬದಲಾಯಿಸಿ ಬಂದಿದ್ದೀರಿ. ನಿಮ್ಮ 84 ಜನ್ಮಗಳು ಪೂರ್ತಿಯಾಗಿರುವ ಕಾರಣ ನಾನು ಬಂದಿದ್ದೇನೆಂದು ತಂದೆ ಹೇಳುತ್ತಾರೆ. ನಿಮ್ಮ ಪಾತ್ರ ಮುಗಿದರೆ, ಎಲ್ಲರ ಪಾತ್ರ ಮುಗಿದ ಹಾಗೆ. ಈ ಜ್ಞಾನವನ್ನು ಧಾರಣೆ ಮಾಡಿ ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ತಂದೆಯ

ಮುಖಾಂತರ ಜ್ಞಾನ ಪೂರ್ಣರಾಗುವುದರಿಂದ ಇಡೀ ವಿಶ್ವದ ಮಾಲೀಕರಾಗುತ್ತೀರಿ ಹಾಗೂ ವಿಶ್ವವೂ ಸಹ ಹೊಸ ವಿಶ್ವವಾಗಿ ಪರಿವರ್ತನೆ ಆಗುತ್ತದೆ. ಭಕ್ತಿ ಮಾರ್ಗದಲ್ಲಿನ ಎಲ್ಲಾ ವಸ್ತುಗಳನ್ನು ಸಮಾಪ್ತಿ ಮಾಡಬೇಕು. ಒಬ್ಬರೂ ಸಹ ಹೇ ಪ್ರಭು ಎಂದು ಹೇಳುವವರು ಇರುವುದಿಲ್ಲ. ಅಯ್ಯೋ ರಾಮ! ಹೇ ಪ್ರಭು! ಈ ಅಕ್ಷರಗಳು ದುಃಖದಲ್ಲಿ ಹೇಳುತ್ತಾರೆ. ಸತ್ಯಯುಗದಲ್ಲಿ ದುಃಖವಿಲ್ಲದ ಕಾರಣ ಇಂತಹ ಮಾತುಗಳಿರುವುದಿಲ್ಲ. ಯಾವ ತಂದೆಯನ್ನು ಈ ರೀತಿ ನೆನಪು ಮಾಡುತ್ತಾರೆ, ಈಗ ಅವರ ಮತದಂತೆ ಏಕೆ ನಡೆಯಬಾರದು? ಈಶ್ವರೀಯ ಮತದಿಂದ ಸದಾ ಸುಖಿಗಳಾಗುತ್ತೀರಿ. ಶ್ರೀಮತದಂತೆ ನಡೆಯದವರಿಗೆ ಮಹಾಮೂರ್ಖರೆಂದು ಕರೆಯಲಾಗುವುದೆಂದು ತಿಳಿದುಕೊಳ್ಳುತ್ತಾರೆ. ಈಶ್ವರೀಯ ಮತ ಹಾಗೂ ಅಸುರಿ ಮತ ಈ ಎರಡು ಮತಗಳಿಗೆ ಹಗಲು ರಾತ್ರಿಯ ಅಂತರವಿದೆ. ಈಗ ಯಾವ ಕಡೆ ಹೋಗಬೇಕೆಂದು ನೀವೇ ನಿರ್ಣಯ ಮಾಡಬೇಕು. ಮಾಯೆಯಿಂದ ಅಪಾರವಾದ ದುಃಖವಿದೆ. ಈಶ್ವರನಿಂದ ಇಪ್ಪತ್ತೊಂದು ಜನ್ಮಗಳ ಸುಖವಿದೆ. ಈಗ ಯಾರ ಮತದಂತೆ ನಡೆಯಬೇಕು.

ತಂದೆ ಹೇಳುತ್ತಾರೆ - ಶ್ರೀಮತದಂತೆ ನಡೆಯುವುದಾದರೆ ನಡೆಯಿರಿ. ಮೊದಲ ಮಾತು ಕಾಮದ ಮೇಲೆ ವಿಜಯಿಗಳಾಗಿ. ಅದಕ್ಕಿಂತ ಮೊದಲು ನನ್ನನ್ನು ನೆನಪು ಮಾಡಿ. ಈ ಹಳೆಯ ಶರೀರವನ್ನು ಬಿಡಲೇ ಬೇಕು. ಏಕೆಂದರೆ ಈಗ ಹಿಂತಿರುಗ ಬೇಕಾಗಿದೆ. ಈ ಸಮಯದಲ್ಲಿ ಈಗ ನಾನು 84 ಜನ್ಮಗಳ ಹಳೆಯ ಪೊರೆಯನ್ನು ಬಿಡುತ್ತಿದ್ದೇನೆಂಬ ಆಲೋಚನೆ ಇರಬೇಕು. ಸತ್ಯಯುಗದಲ್ಲಿ ವೃದ್ಧ ಶರೀರವನ್ನು ಬಿಟ್ಟು ಮತ್ತೆ ಬಾಲ್ಯದಲ್ಲಿ ಹೋಗುತ್ತೇನೆಂದು ತಿಳಿದುಕೊಳ್ಳುತ್ತಾರೆ. ಈ ಹಳೆಯ ಪ್ರಪಂಚದ ಮಹಾ ವಿನಾಶವಾಗುತ್ತದೆ. ಈ ಮಾತುಗಳು ಯಾವ ಶಾಸ್ತ್ರಗಳಲ್ಲಿಲ್ಲ. ಇದನ್ನು ತಂದೆ ಸಮ್ಮುಖದಲ್ಲಿ ಕುಳಿತು ತಿಳಿಸುತ್ತಾರೆ. ಈ ಎಲ್ಲಾ ಮಾತುಗಳು ಗಮನದಲ್ಲಿದ್ದರೆ ಸಾಕು ಇದು ಸೌಭಾಗ್ಯದ ಮಾತಾಗುತ್ತದೆ. ತಿಳಿದುಕೊಳ್ಳಲು ಎಷ್ಟೊಂದು ಸಹಜವಾಗಿದೆ. ಆದರೆ ಮಧುರ ಮನೆ, ಮಧುರ ರಾಜಧಾನಿಯನ್ನು ಹೇಗೆ ಮರೆಯುತ್ತಾರೆಂದು ತಿಳಿಯುವುದೇ ಇಲ್ಲ. ಸಂಗದೋಷದಲ್ಲಿ ಬಂದು ಹೊಲಸಾಗುತ್ತಾರೆ. ತಂದೆ ಹೇಳುತ್ತಾರೆ ಮಕ್ಕಳೇ ಅಶುದ್ಧ ವಿಕಲ್ಪಗಳು ಬಹಳ ಬರುತ್ತವೆ, ಆದರೆ ಕರ್ಮೇಂದ್ರಿಯಗಳಿಂದ ಯಾವುದೇ ವಿಕರ್ಮವನ್ನು ಮಾಡಬಾರದು. ವಿಕರ್ಮವನ್ನು ಮಾಡಿ ನಂತರ ತಂದೆಗೆ ಕ್ಷಮೆ ಮಾಡಿ ಎಂದು ಪತ್ರ ಬರೆಯುವಂತೆ ಆಗಬಾರದು. ವಿಕರ್ಮ ಮಾಡಿದರೆ ನೂರು ಪಟ್ಟು ಶಿಕ್ಷೆ ಸಿಗುತ್ತದೆ. ಮತ್ತೆ ತಂದೆಯಿಂದ ಸತ್ಯವನ್ನು ಬಚ್ಚಿಟ್ಟರೆ ಬಹಳ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಅಜಮಿಳರು ಯಾರಾಗುತ್ತಾರೆಂದು ಈ ಸಮಯದಲ್ಲಿ ತಿಳಿಯುತ್ತದೆ. ಈಶ್ವರನ ಮಡಿಲಲ್ಲಿ ಬಂದು ಮತ್ತೆ ವಿಕಾರದಲ್ಲಿ ಹೋಗುವುದರಿಂದ ಸಿದ್ಧವಾಗುತ್ತದೆ - ಇವರು ದೊಡ್ಡ ಅಜಮಿಳ, ಪಾಪಾತ್ಮನಾಗಿರುವ ಕಾರಣ ವಿಕಾರದ ವಿನಃ ಇರುವುದಿಲ್ಲ. ಎಲ್ಲಕ್ಕಿಂತ ತುಂಬಾ ಹೊಲಸಾದ ಸ್ಥಾನ ಸಿನಿಮಾವಾಗಿದೆ. ಯಾವ ವಿಕಾರವಾದರೂ ಸಹ ದೂರ ಓಡಿಸಬೇಕು. ಬ್ರಾಹ್ಮಣರು ನಿರ್ವಿಕಾರಿಗಳಾಗಿರುವ ಕಾರಣ ಬ್ರಾಹ್ಮಣರ ಸಂಗವೇ ಬೇಕಾಗುತ್ತದೆ. ಶೂದ್ರರ ಸಂಗದಲ್ಲಿ ದುಃಖಿಗಳಾಗುತ್ತಾರೆ. ಶರೀರದ ಪಾಲನೆಗಾಗಿ ಎಲ್ಲವನ್ನು ಮಾಡಬೇಕಾಗುತ್ತದೆ, ಆದರೆ ಕರ್ಮೇಂದ್ರಿಯಗಳಿಂದ ಯಾವ ವಿಕರ್ಮ ಮಾಡಬಾರದು. ಹಾ! ಮಕ್ಕಳ ಸುಧಾರಣೆಗಾಗಿ ತಿಳಿಸುತ್ತೇನೆ-ಹಗ್ಗದಿಂದ ಬಂಧಿಸಬೇಕು, ಊಟ ಕೊಡಬಾರದು. ಈ ರೀತಿ ಮಕ್ಕಳನ್ನು ಸುಧಾರಣೆ ಮಾಡಬಹುದು. ರಚನೆಯನ್ನು ರಚಿಸಿದ ಮೇಲೆ ಜವಾಬ್ದಾರಿಯೂ ಸಹ ಇರುತ್ತದೆ. ಅವರ ಮೂಲಕವೂ ಸಹ ಸತ್ಯ ಸಂಪಾದನೆ ಮಾಡಿಸಬೇಕು. ಚಿಕ್ಕ- ಚಿಕ್ಕ ಮಕ್ಕಳಿಗೆ ಅಲ್ಪ- ಸ್ವಲ್ಪ ಕಲಿಸಬೇಕು. ಶಿವತಂದೆಯನ್ನು ನೆನಪು ಮಾಡುವುದರಿಂದ ಸಹಯೋಗ ಸಿಗುತ್ತದೆ. ಸತ್ಯ ಹೃದಯದ ಮೇಲೆ ಪ್ರಭು ಪ್ರಸನ್ನವಾಗುತ್ತಾರೆ. ಸತ್ಯ ಹೃದಯದ ಮಕ್ಕಳಿಗೆ ಮಾತ್ರ ತಂದೆಯಿಂದ ಆಶ್ರಯ ಸಿಗುತ್ತದೆ. ಈಗ ಇಡೀ ಪ್ರಪಂಚದಲ್ಲಿ ಪರಸ್ಪರ ಯಾರಿಗೂ ಸಹ ಆಶ್ರಯದಾತರಿಲ್ಲ. ಆಶ್ರಯವೆಂದರೆ ಸುಖದಲ್ಲಿ ಕರೆದುಕೊಂಡು ಹೋಗುವುದು. ಎಲ್ಲರೂ ಒಬ್ಬ ಪರಮಾತ್ಮನನ್ನು ನೆನಪು ಮಾಡುತ್ತಾರೆ, ಏಕೆಂದರೆ ಅವರು ಬಂದು ಎಲ್ಲರಿಗೂ ಸಹ ಶಾಂತಿ ಕೊಡುತ್ತಾರೆ. ಸತ್ಯಯುಗದಲ್ಲಿ ಎಲ್ಲರೂ ಸುಖಿಗಳಾಗಿರುತ್ತಾರೆ. ಉಳಿದ ಎಲ್ಲಾ ಆತ್ಮಗಳು ಶಾಂತಿ I ದೇಶದಲ್ಲಿರುತ್ತಾರೆ. ಭಾರತ ಸ್ವರ್ಗವಾಗಿತ್ತು, ಎಲ್ಲರೂ ವಿಶ್ವದ ಮಾಲೀಕರಾಗಿದ್ದರು. ಅಶಾಂತಿ, ಹಿಂಸೆ ಯಾವುದೂ ಇರಲಿಲ್ಲ. ಅಗತ್ಯವಾಗಿ ತಂದೆಯೇ ಆ ಹೊಸ ಪ್ರಪಂಚವನ್ನು ಮಾಡಿರಬೇಕು. ಅವರಿಗೆ ತಂದೆಯಿಂದ ಆಸ್ತಿ ದೊರೆತಿರಬೇಕು. ಹೇಗೆ ಇದನ್ನು ಯಾರೂ ತಿಳಿದುಕೊಂಡಿಲ್ಲ. ಅದನ್ನು ರಾಮರಾಜ್ಯವೆಂದು ಕರೆಯಲಾಗಿದ್ದು, ಅದು ಈಗ ಇಲ್ಲದಾಗಿದೆ. ಒಮ್ಮೆ ಇರಬೇಕಲ್ಲವೆ. ಅದೇ ಭಾರತ ಪೂಜ್ಯವಾಗಿತ್ತು, ಈಗ ಪೂಜಾರಿಯಾಗಿದೆ. ಪುನಃ ಅವಶ್ಯವಾಗಿ ಪೂಜ್ಯವಾಗುತ್ತದೆ. ಅದಕ್ಕಾಗಿ ನೀವು ಪುರುಷಾರ್ಥ ಮಾಡುತ್ತಿದ್ದೀರಿ , ಇದನ್ನು ಕೃಷ್ಣನ ಆತ್ಮ ತನ್ನ ಅಂತಿಮ ಜನ್ಮದಲ್ಲಿ ಬಂದು ಕೇಳುತ್ತಿದೆ, ಅವರೇ ಪುನಃ ಕೃಷ್ಣ ಆಗುತ್ತಾರೆ. ಅಮೃತವೇಳೆ ಎಚ್ಚರವಾಗಿ ತಂದೆಯನ್ನು ನೆನಪು ಮಾಡಬೇಕು. ಆಗ ಶುದ್ಧ ಪ್ರಕಂಪನಗಳಿರುತ್ತವೆ. ಆತ್ಮ ರಾತ್ರಿ ಆಯಾಸವಾಗಿ ನಾನು ಶರೀರದಿಂದ ಬೇರೆ ಆಗುತ್ತೇನೆಂದು ಹೇಳುತ್ತದೆ. ನೀವೂ ಸಹ ಈ ಪ್ರಪಂಚದಲ್ಲಿದ್ದರೂ ಸಹ ಬುದ್ಧಿಯೋಗ ಸದಾ ಅಲ್ಲಿರಬೇಕು. ಅಮೃತವೇಳೆ ಎಚ್ಚರವಾಗಿ ನೆನಪು ಮಾಡುವುದರಿಂದ ದಿನದಲ್ಲೂ ಸಹ ನೆನಪು ಬರುತ್ತದೆ. ಇದು ಸಂಪಾದನೆ ಆಗಿದೆ. ಎಷ್ಟು ತಂದೆಯನ್ನು ನೆನಪು ಮಾಡುತ್ತೀರಿ ಅಷ್ಟು ವಿಕರ್ಮಾಜೀತ್ ಆಗಬಹುದು, ಧಾರಣೆಯೂ ಸಹ ಆಗುತ್ತದೆ, ಯಾರು ಪವಿತ್ರವಾಗಿದ್ದು ನೆನಪಲ್ಲಿರುತ್ತಾರೆ, ಅವರೇ ಸೇವೆ ಮಾಡುತ್ತಾರೆ. ತಂದೆಯ ಆದೇಶದಂತೆ ನಡೆಯುವುದರಿಂದ ತಂದೆಯು ಪ್ರಸನ್ನವಾಗುತ್ತಾರೆ. ಮೊದಲು ಸೇವೆ ಮಾಡಿ ಎಲ್ಲರಿಗೂ ದಾರಿ ತೋರಿಸಬೇಕು. ಯೋಗದ ಮಾರ್ಗ ತೋರಿಸಲು ಜ್ಞಾನವನ್ನು ಕೊಡಬೇಕಲ್ಲವೆ! ಯೋಗದಲ್ಲಿರುವುದರಿಂದ ವಿಕರ್ಮ ವಿನಾಶವಾಗುತ್ತದೆ. ಜೊತೆಯಲ್ಲಿ ಚಕ್ರವನ್ನೂ ಸಹ ತಿರುಗಿಸಬೇಕು. ಜ್ಞಾನ ಹಾಗೂ ಗುಣ ಸಂಪನ್ನ(ರೂಪ ಬಸಂತ್)ರಾಗಬೇಕು. ಮತ್ತೆ ಜ್ಞಾನಬಿಂದುಗಳು ಸಿಗುತ್ತಿರುತ್ತವೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ನಿಸ್ಸಾರ ಜಗತ್ತು ಹಾಗೂ ನಿಸ್ಸಾರ ಶರೀರದೊಂದಿಗೆ ಮಮತ್ವವನ್ನು ತೆಗೆದು ಒಬ್ಬ ತಂದೆಯನ್ನು ಹಾಗೂ ಮನೆಯನ್ನು ನೆನಪು ಮಾಡಬೇಕು. ಶೂದ್ರರ ಸಂಗದಿಂದ ತಮ್ಮನ್ನು ಕಾಪಾಡಿಕೊಳ್ಳಬೇಕು.

2. ವಿಕರ್ಮಾಜೀತ್ ಆಗುವ ಸಲುವಾಗಿ ಅಮೃತವೇಳೆ ಎಚ್ಚರವಾಗಿ ನೆನಪಿನಲ್ಲಿ ಕುಳಿತುಕೊಳ್ಳಬೇಕು. ಈ ಶರೀರದಿಂದ ಭಿನ್ನವಾಗುವ ಅಭ್ಯಾಸ ಮಾಡಬೇಕು.

ವರದಾನ: ಹಳೆಯ ಪ್ರಪಂಚ ಹಾಗೂ ಸಂಸ್ಕಾರಗಳ ಆಕರ್ಷಣೆಯಿಂದ ಬದುಕಿದ್ದಂತೆಯೇ ಸಾಯುವಂತಹ ಯಥಾರ್ಥ ಮರುಜೀವಾ ಭವ.

ಯಥಾರ್ಥವಾಗಿ ಬದುಕಿದ್ದಂತೆಯೇ ಸಾಯುವುದು ಎಂದರೆ ಸದಾಕಾಲಕ್ಕಾಗಿ ಹಳೆಯ ಪ್ರಪಂಚ ಅಥವ ಹಳೆಯ ಸಂಸ್ಕಾರಗಳಿಂದ ಸಂಕಲ್ಪ ಮತ್ತು ಸ್ವಪ್ನದಲ್ಲಿಯೂ ಸಾಯುವುದು. ಸಾಯುವುದು ಎಂದರೆ ಪರಿವರ್ತನೆಯಾಗುವುದು. ಅಂತಹವರನ್ನು ತನ್ನ ಕಡೆಗೆ ಯಾವುದೇ ಆಕರ್ಷಣೆಯು ಆಕರ್ಷಿಸಲು ಸಾಧ್ಯವಿಲ್ಲ. ಅವರೆಂದಿಗೂ ಏನು ಮಾಡಲಿ, ಅದನ್ನು ಇಷ್ಟ ಪಡಲಿಲ್ಲ. ಆದರೆ ಆಗಿ ಬಿಟ್ಟಿತು....... ಈ ರೀತಿ ಹೇಳಲು ಸಾಧ್ಯವಿಲ್ಲ. ಹಲವು ಮಕ್ಕಳು ಬದುಕಿದ್ದಂತೆಯೇ ಸತ್ತ ನಂತರವೂ ಬದುಕಿ ಬಿಡುತ್ತಾರೆ. ರಾವಣನ ಒಂದು ತಲೆಯನ್ನು ಸಮಾಪ್ತಿ ಮಾಡುತ್ತೀರೆಂದರೆ ಇನ್ನೊಂದು ಬಂದು ಬಿಡುತ್ತದೆ ಆದರೆ ಅದರ ಮೂಲ ಬುನಾದಿಯನ್ನೇ ಸಮಾಪ್ತಿ ಮಾಡಿಬಿಡುತ್ತೀರೆಂದರೆ, ಅದರ ರೂಪವು ಬದಲಾಯಿಸಿಕೊಂಡು ಮಾಯೆಯು ಯುದ್ಧ ಮಾಡುವುದಿಲ್ಲ.

ಸ್ಲೋಗನ್: ಯಾರು ನೆನಪು ಮತ್ತು ಸೇವೆಯಲ್ಲಿ ಸದಾ ಬ್ಯುಸಿಯಾಗಿರುತ್ತಾರೆಯೋ ಅವರೇ ಅದೃಷ್ಟವಂತರು.